Published by Noopura Bhramari(ನೂಪುರಭ್ರಮರಿ) – An IKS Centre (Sept-Oct 2022) As a part of Nrityashilpayatra programme(ನೃತ್ಯಶಿಲ್ಪಯಾತ್ರೆ) . www.noopurabhramari.com


# ದೇಗುಲದ ಛಾವಣಿಯಲ್ಲಿ ಅಷ್ಟದಿಕ್ಪಾಲಕರು

– ವಿದುಷಿ ದಿವ್ಯಾ ಪ್ರಸಾದ್, ಬೆಂಗಳೂರು.

ಹಿಂದೂ ಧರ್ಮದಲ್ಲಿ ಸಂಖ್ಯೆ ಎಂಟು (೮) ವಿಶೇಷವಾದ ಸ್ಥಾನವನ್ನು ಪಡೆದಿದೆ. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ ಎಂಬ ಅಷ್ಟಸಿದ್ಧಿಗಳು ; ಅದರ ಮೇಲೆ ಸಂಪೂರ್ಣ ಹಿಡಿತ ಪಡೆದವರು ವಿಶೇಷ ಅಲೌಕಿಕ ಮತ್ತು ದೈವೀ ಶಕ್ತಿಗಳನ್ನು ಹೊಂದುತ್ತಾರೆ ಎಂದು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಹನುಮಾನ್ ಚಾಲಿಸದಲ್ಲಿ ಭಗವಾನ್ ಹನುಮಂತನು ಅಷ್ಟ ಸಿದ್ಧಿಯನ್ನು ಹೊಂದಿರುವುದು ಮಾತ್ರವಲ್ಲದೆ ತನ್ನ ಭಕ್ತರಿಗೆ ಅಷ್ಟ ಸಿದ್ಧಿಯನ್ನು ದಯಪಾಲಿಸುವನು ಎಂದು ಹೇಳಲಾಗಿದೆ.

ಇನ್ನು ದೇವರಿಗೆ ಮತ್ತು ಗುರು ಹಿರಿಯರಿಗೆ ನಮಸ್ಕರಿಸುವುದು ಭಕ್ತಿ ಮತ್ತು ಗೌರವದ ಸಂಕೇತ. ಕೆಲವರು ಕೈ ಮುಗಿದು, ಕುಳಿತು ನಮಸ್ಕರಿಸಿದರೆ ಕೆಲವರು ಸಾಷ್ಟಾಂಗ ನಮಸ್ಕಾರವನ್ನು ಮಾಡುತ್ತಾರೆ. ಸಾಷ್ಟಾಂಗ ಎಂಬ ಪದವೂ ಸಹ ಎಂಟು ಸಂಖ್ಯೆಯ ಅಂಕಿ ಅಂಶಗಳನ್ನು ನೀಡುತ್ತದೆ. ಸ ಎಂದರೆ ಜೊತೆ, ಅಷ್ಟ ಎಂದರೆ ಎಂಟು ಮತ್ತು ಅಂಗ ಎಂದರೆ ಅಂಗಗಳು, ಸಾಷ್ಟಾಂಗ ನಮಸ್ಕಾರ ಎಂದರೆ, ಎಂಟು ಅಂಗಗಳೊಂದಿಗೆ (ಅಷ್ಟ-ಅಂಗ) ಮಾಡುವ ಪ್ರಣಾಮ. ಎರಡು ಕೈಗಳು, ಎರಡು ಕಾಲುಗಳು, ಎರಡು ತೋಳುಗಳು, ಎದೆ ಮತ್ತು ಹಣೆಯು ನೆಲವನ್ನು ಸ್ಪರ್ಶಿಸುವುದು ಗೌರವ, ನಮನ ಮತ್ತು ದೇವರಿಗೆ ಸಂಪೂರ್ಣ ಶರಣಾಗತಿಯ ಸಂಕೇತವಾಗಿದೆ.

ಶಾಸ್ತ್ರಗಳು ಭೂಮಿಯ ಅಕ್ಷದ ಆಧಾರದ ಮೇಲೆ ಎಂಟು ದಿಕ್ಕುಗಳನ್ನು ಗುರುತಿಸಿವೆ. ಇದರಲ್ಲಿ ನಾಲ್ಕು ಪ್ರಧಾನ ದಿಕ್ಕುಗಳು: ಮೂಡಣ (ಪೂರ್ವ), ಪಡುವಣ (ಪಶ್ಚಿಮ), ಬಡಗಣ (ಉತ್ತರ) ಮತ್ತು ತೆಂಕಣ (ದಕ್ಷಿಣ) ಹಾಗೂ ನಾಲ್ಕು ಉಪ ದಿಕ್ಕುಗಳು: ವಾಯುವ್ಯ, ನೈರುತ್ಯ, ಆಗ್ನೇಯ ಮತ್ತು ಈಶಾನ್ಯ. ಹಿಂದೂ ಪುರಾಣಗಳ ಪ್ರಕಾರ ಪ್ರತಿಯೊಂದು ದಿಕ್ಕಿಗೂ ಒಬ್ಬ ಅಧಿಪತಿಯಿದ್ದು ಅವರನ್ನು ದಿಕ್ಪಾಲಕರೆಂದು ಕರೆಯುತ್ತಾರೆ. "ದಿಕ್" ಎಂದರೆ ದಿಕ್ಕುಗಳು ಮತ್ತು "ಪಾಲಕರು" ಎಂದರೆ ಆಡಳಿತಗಾರರು. ಹೀಗೆ ಒಟ್ಟಾಗಿ ಎಂಟು ದಿಕ್ಕುಗಳ ಅಧಿಪತಿಗಳನ್ನು 'ಅಷ್ಟದಿಕ್ಪಾಲಕ' ರೆಂದು ಕರೆಯುತ್ತಾರೆ. ಅಷ್ಟದಿಕ್ಪಾಲಕರ ಹೆಸರು ಮತ್ತು ಅವರ ಅಧಿಪತ್ಯದಲ್ಲಿರುವ ದಿಕ್ಕುಗಳನ್ನು ಕೆಳಗಿನ ಚಿತ್ರದಲ್ಲಿ ತೋರಿಸಲಾಗಿದೆ.




ದೇವರ ಪೂಜಾ ವಿಧಿ ವಿಧಾನಗಳಲ್ಲಿ ಅಷ್ಟ ದಿಕ್ಪಾಲಕರಿಗೆ ವಿಶೇಷ ಸ್ಥಾನವನ್ನು ಕಲ್ಪಿಸಲಾಗಿದೆ. ಹೋಮ ಹವನಗಳನ್ನು ಮಾಡುವಾಗ ಅಷ್ಟದಿಕ್ಪಾಲಕರನ್ನು ಆಹ್ವಾನಿಸಿ ಆ ಸ್ಥಳದಲ್ಲಿರುವ ನಕಾರಾತ್ಮಕ ಮತ್ತು ದುಷ್ಟ ಶಕ್ತಿಗಳನ್ನು ತೊಡೆದು ಹಾಕಿ, ಸ್ಥಳವನ್ನು ಶುದ್ಧೀಕರಿಸಿ ಎಂಟು ದಿಕ್ಕುಗಳಿಂದ ನಮಗೆ ರಕ್ಷಣೆಯನ್ನು ಒದಗಿಸುವಂತೆ ಬೇಡಿಕೊಳ್ಳುತ್ತಾರೆ. ಅಷ್ಟದಿಕ್ಪಾಲಕರ ಆರಾಧನೆಯು ಕೇವಲ ಹೋಮ ಹವನದಲ್ಲಷ್ಟೇ ಅಲ್ಲದೆ ನೃತ್ಯದ ಮೂಲಕವೂ ನಡೆಯುತ್ತಿತ್ತು ಎನ್ನಲಾಗಿದೆ. ದೇವಾಲಯದ ಬ್ರಹ್ಮೋತ್ಸವದ ಸಂದರ್ಭದಲ್ಲಿ ವಿಶೇಷವಾಗಿ ನವಸಂಧಿ ಕೌತುವಂಗಳನ್ನು ಪ್ರದರ್ಶಿಸಲಾಗುತ್ತಿತ್ತು. ನವಸಂಧಿ ಎಂದರೆ

Copyright Protected

ಅಷ್ಟದಿಕ್ಕುಗಳೊಡನೆ ಮಧ್ಯ ಭಾಗವನ್ನು ಸೇರಿ ಒಂಬತ್ತು ದಿಕ್ಕುಗಳು ಎಂದರ್ಥ. ನವಸಂಧಿ ಕೌತುವಂ ಎಂಬುದು ಒಂಬತ್ತು (ನವ) ದಿಕ್ಕುಗಳ (ಸಂಧಿ) ರಕ್ಷಕರನ್ನು ಸ್ತುತಿಸುವ ಸಂಯೋಜನೆಯಾಗಿದೆ. ಪ್ರತಿಯೊಂದು ಕೌತುವಂನಲ್ಲಿ ಆ ದಿಕ್ಕಿನ ಪಾಲಕರ ವಿವರಣೆ, ಅವರ ಒಡನಾಡಿ, ವಾಹನ ಹಾಗೂ ನೃತ್ಯದಲ್ಲಿ ಅವರನ್ನು ಪ್ರತಿನಿಧಿಸುವ ಹಸ್ತ ಮುದ್ರೆಗಳನ್ನು ವಿವರಿಸಲಾಗಿದೆ.

ನಮ್ಮ ದೇವಾಲಯಗಳ ಕೆತ್ತನೆಗಳಲ್ಲಿ ಸಾಧಾರಣವಾಗಿ ಮುಖ ಮಂಟಪದ ಛಾವಣಿಯಲ್ಲಿ ಅಷ್ಟದಿಕ್ಪಾಲಕರನ್ನು ಕಾಣಬಹುದು. ಇದು ನಾವು ದೇವಾಲಯವನ್ನು ಪ್ರವೇಶಿಸುವಾಗ ಅಷ್ಟದಿಕ್ಪಾಲಕರು ನಮಗೆ ಅಷ್ಟ ದಿಕ್ಕುಗಳಿಂದಲೂ ರಕ್ಷಣೆಯನ್ನು ನೀಡಿ ಕಾಪಾಡುತ್ತಾರೆ ಎನ್ನುವ ಸಂಕೇತ. ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ನಿರ್ಮಾಣಗೊಂಡಿರುವ ಅನೇಕ ದೇವಾಲಯಗಳಲ್ಲಿ ಅಷ್ಟದಿಕ್ಪಾಲಕರ ಕೆತ್ತನೆಗಳನ್ನು ಕಾಣಬಹುದು. ಪ್ರಮುಖವಾಗಿ ಆವನಿಯ ರಾಮಲಿಂಗೇಶ್ವರ, ಕೋಲಾರದ ಸೋಮೇಶ್ವರ ಹಾಗೂ ನಂದಿಯ ಭೋಗ ನಂದೀಶ್ವರದ ಮುಖಮಂಟಪದ ಛಾವಣಿಯಲ್ಲಿ ಅಷ್ಟದಿಕ್ಪಾಲಕರಿಂದ ಸುತ್ತುವರೆದಿರುವ ಉಮಾ ಮಹೇಶ್ವರನ ಅತ್ಯುತ್ತಮ ಕಲಾಕೃತಿಗಳಿವೆ.

"ನೂಪುರ ಭ್ರಮರಿ" ಸಂಸ್ಥೆಯು ಆಯೋಜಿಸಿದ ನೃತ್ಯಶಿಲ್ಪಯಾತ್ರೆ ಎಂಬ ಅಧ್ಯಯನ ಕಾರ್ಯಕ್ರಮದ ಅಂಗವಾಗಿ ಈ ದೇವಾಲಯಗಳಿಗೆ ಭೇಟಿ ಕೊಡುವ ಅವಕಾಶ ಒದಗಿ ಬಂತು. ಸೋಮೇಶ್ವರ ದೇವಾಲಯದ ಮುಖಮಂಟಪ, ವಸಂತಮಂಟಪ ಹಾಗೂ ಕಲ್ಯಾಣಮಂಟಪದ ಛಾವಣಿಗಳಲ್ಲಿ ಕಂಡು ಬಂದ ಅಷ್ಟದಿಕ್ಪಾಲಕರ ಕೆತ್ತನೆಗಳ ಬಗ್ಗೆ ಒಂದು ಕಿರುನೋಟವಿದು.



ಕೋಲಾರ ಸೋಮೇಶ್ವರ ದೇವಾಲಯದ ಛಾವಣಿಯಲ್ಲಿ ಅಷ್ಟದಿಕ್ಪಾಲಕರು

## ಇಂದ್ರ ಮತ್ತು ಈಶಾನ



ದೇವತೆಗಳ ರಾಜನಾದ ಇಂದ್ರನು ಪೂರ್ವ ದಿಕ್ಕಿನ ಕಾವಲುಗಾರ. ಅವನು ಮಳೆ ಮತ್ತು ಮಿಂಚುಗಳ ಅಧಿದೇವತೆ. ತನ್ನ ವಾಹನವಾದ ಐರಾವತದ ಮೇಲೆ ಕುಳಿತು ವಜ್ರಾಯುಧವನ್ನು ಹಿಡಿದಿರುವಂತೆ ಕೆತ್ತಲಾಗಿದೆ.

ಉತ್ತರ ಮತ್ತು ಪೂರ್ವ ದಿಕ್ಕಿನ ಮಧ್ಯದಲ್ಲಿ ಬರುವ ದಿಕ್ಕನ್ನು ಈಶಾನ್ಯ ದಿಕ್ಕು ಎಂದು ಕರೆಯಲಾಗುತ್ತದೆ. ಶಿವನ ಒಂದು ರೂಪವಾದ

Copyrighted

ಈಶಾನನು ಈಶಾನ್ಯ ದಿಕ್ಕನ್ನು ಆಳುತ್ತಾನೆ. ಈ ದಿಕ್ಕು ಜ್ಞಾನ ಮತ್ತು ಸಮೃದ್ಧಿಯನ್ನು ಪ್ರತಿನಿಧಿಸುತ್ತದೆ ಮತ್ತು ಎಲ್ಲರಿಗೂ ಅತ್ಯಂತ ಮಂಗಳಕರವಾದ ದಿಕ್ಕು ಎಂದು ಪರಿಗಣಿಸಲಾಗಿದೆ. ಈ ಕೆತ್ತನೆಯಲ್ಲಿ ನಂದಿಯ ಮೇಲೆ ಕುಳಿತು ಕೈಯಲ್ಲಿ ಡಮರು ಹಾಗೂ ತ್ರಿಶೂಲವನ್ನು ಹಿಡಿದಿರುವ ಶಿವನನ್ನು ಕಾಣಬಹುದು.

## ವರುಣ ಮತ್ತು ನಿರುತಿ



ಕೋಲಾರ ಸೋಮೇಶ್ವರ ದೇವಾಲಯದಲ್ಲಿ ವರುಣ ಹಾಗೂ ನಿಋತಿ

ವರುಣ ಅಥವಾ ಜಲದೇವತೆ ಪಶ್ಚಿಮ ದಿಕ್ಕನ್ನು ಪ್ರತಿನಿಧಿಸುತ್ತಾನೆ. ಈ ಕೆತ್ತನೆಯಲ್ಲಿ ಮಕರದ (ಮೊಸಳೆ) ಮೇಲೆ ಕುಳಿತು ಪಾಶವನ್ನು ತನ್ನ ಆಯುಧವಾಗಿ ಹಿಡಿದಿರುವ ವರುಣನನ್ನು ಕಾಣಬಹುದು.

ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನ ನಡುವಿನಲ್ಲಿ ಬರುವ ದಿಕ್ಕನ್ನು ನೈರುತ್ಯ ಮೂಲೆ ಎಂದು ಕರೆಯಲಾಗುತ್ತದೆ. ನೈರುತ್ಯ ದಿಕ್ಕಿನ ಕಾವಲುಗಾರ ನಿಋತಿ. ಇಲ್ಲಿ ಮನುಷ್ಯನ ಮೇಲೆ ಸವಾರಿ ಮಾಡುತ್ತಿರುವ ನಾಲ್ಕು ತೋಳುಗಳುಳ್ಳ ನಿಋತಿಯನ್ನು ಕಾಣಬಹುದು. ಆಗಮಗಳು ಸೇರಿದಂತೆ ಅನೇಕ ಗ್ರಂಥಗಳ ಪ್ರಕಾರ, ಅವನು ನೋಡಲು ಭಯಂಕರವಾಗಿದ್ದು ಸಾಮಾನ್ಯವಾಗಿ ಕಪ್ಪು ಚರ್ಮದವನೂ ಹಾಗೂ ಎರಡು ಅಥವಾ ನಾಲ್ಕು ತೋಳುಗಳನ್ನು ಹೊಂದಿರುವವನು.

## ವಾಯು ಮತ್ತು ಕುಬೇರ



ಸಂಪತ್ತಿನ ದೇವರು ಕುಬೇರನು ಉತ್ತರ ದಿಕ್ಕಿನ ಅಧಿಪತಿ. ಅವನು ಐಶ್ವರ್ಯ ಮತ್ತು ಸಂಪತ್ತನ್ನು ಕೊಡುವವನು. ಈ ಕೆತ್ತನೆಯಲ್ಲಿ ಅಶ್ವಾರೂಡನಾಗಿರುವ ಕುಬೇರನಿಗೆ ಎರಡು ಕೈಗಳಿದ್ದು ಬಲಗೈಯಲ್ಲಿ ಕತ್ತಿಯನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಇದು ಸಂಪತ್ತನ್ನು ಅರಸಿ ಹೊರಟಾಗ ಎದುರಾಗುವ ಎಲ್ಲಾ ಅಡೆತಡೆಗಳನ್ನು ಆತ ನಿವಾರಿಸುವನು ಎನ್ನುವ ಸಂಕೇತ ಎಂದು ಹೇಳಲಾಗಿದೆ.

ಉತ್ತರ ಮತ್ತು ಪಶ್ಚಿಮದ ನಡುವೆ ಬರುವ ವಾಯವ್ಯ ದಿಕ್ಕಿನ ಅಧಿಪತಿ ವಾಯು ದೇವರು. ಇಲ್ಲಿ ಸಾರಂಗವನ್ನೇರಿ ಹೊರಟ ವಾಯು ದೇವನು ಎರಡು ಕೈಗಳಲ್ಲಿ ಬೀಸುವ ಧ್ವಜಗಳನ್ನು ಹಿಡಿದಿರುವಂತೆ ಕೆತ್ತಲಾಗಿದೆ. ಅವುಗಳು ಉಸಿರು ಮತ್ತು ಜೀವನವನ್ನು ಪ್ರತಿನಿಧಿಸುತ್ತದೆ ಎನ್ನಲಾಗಿದೆ.

## ಯಮ ಮತ್ತು ಅಗ್ನಿ



ಮೃತ್ಯು ದೇವತೆಯಾದ ಯಮನು ದಕ್ಷಿಣ ದಿಕ್ಕನ್ನು ಆಳುತ್ತಾನೆ. ಇಲ್ಲಿ ಮಹಿಷವನ್ನೇರಿ ಹೊರಟ ಯಮನು ಪಾಶವನ್ನು ಹಿಡಿದಿರುವುದನ್ನು ಕಾಣಬಹುದು.

ದಕ್ಷಿಣ ಮತ್ತು ಪೂರ್ವದ ನಡುವಲ್ಲಿ ಬರುವ ದಿಕ್ಕನ್ನು ಆಗ್ನೇಯ ದಿಕ್ಕು ಎನ್ನುತ್ತಾರೆ. ಆಗ್ನೇಯ ದಿಕ್ಕನ್ನು ಅಗ್ನಿದೇವನಾದ ಅಗ್ನಿಯು ಕಾಪಾಡುತ್ತಾನೆ. ಅಗ್ನಿಯು ಮೂರು ಮುಖಗಳನ್ನು ಹೊಂದಿದದ್ದು

Copyright Protected

- ಬೆಂಕಿ, ಮಿಂಚು ಹಾಗೂ ಸೂರ್ಯನನ್ನು ಸೂಚಿಸುತ್ತದೆ. ಇಲ್ಲಿ ಮೇಕೆಯ ಮೇಲೆ ಸವಾರಿ ಮಾಡುತ್ತಿರುವ ಅಗ್ನಿಯನ್ನು ಕಾಣಬಹುದು.

ದೇವಾಲಯದ ಛಾವಣಿಗಳಲ್ಲಿ ಅಷ್ಟದಿಕ್ಪಾಲಕರ ಕೆತ್ತನೆಯ ಪರಿಕಲ್ಪನೆ ನಿಜಕ್ಕೂ ಅದ್ಭುತ. ನಾವು ಪ್ರದಕ್ಷಿಣೆಯನ್ನು ಮಾಡುವಾಗ, ಕೇವಲ ನಮ್ಮೊಳಗಿನ ಆತ್ಮಕ್ಕೆ ಅಥವಾ ಎದುರಿಗಿರುವ ದೇವರಿಗಷ್ಟೇ ಅಲ್ಲದೆ, ಅಷ್ಟದಿಕ್ಕುಗಳಲ್ಲಿಯೂ ನಮ್ಮನ್ನು ಕಾಪಾಡುವ ದೈವಶಕ್ತಿಗಳಿಗೂ ಕೂಡ ನಮಸ್ಕರಿಸುತ್ತೇವೆ. ಅಷ್ಟದಿಕ್ಪಾಲಕರು ಸದಾ ನಮ್ಮನ್ನು ಗಮನಿಸಿ ಹರಸಲಿ ಎಂಬುದು ಇದರ ಉದ್ದೇಶ.[i]

---

[i] References:

- https://www.profraguram.com/musings--reflections/ashtadikpalakas
- https://www.awanderingmind.in/2016/11/the-power-of-8-ashta-dikpalas-and-ashta.html
- https://kn.wikipedia.org/wiki/%E0%B2%A6%E0%B2%BF%E0%B2%95%E0%B3%8D%E0%B2%AA%E0%B2%BE%E0%B2%B2%E0%B2%95
- https://www.hinduwebsite.com/hinduism/vedicgods.asp
- Articles - Kavuthuvams - Mallika Jayanthi (narthaki.com)
- Kautuvam - Something about dance — LiveJournal



## ಲೇಖಕರ ಪರಿಚಯ

ಭರತನಾಟ್ಯ ಕಲಾವಿದೆ ವಿದುಷಿ ಶ್ರೀಮತಿ  ದಿವ್ಯಾ ಪ್ರಸಾದ್, ಹಲವು ವರ್ಷಗಳ ಕಾಲ ಶ್ರೀಮತಿ ಸಂಧ್ಯಾ ಕೇಶವರಾವ್ ಅವರಲ್ಲಿ ನೃತ್ಯಾಭ್ಯಾಸವನ್ನು ಮಾಡಿ, ನಂತರ ಗುರು ಕರ್ನಾಟಕ ಕಲಾಶ್ರೀ ಬಿ. ಭಾನುಮತಿ  ಹಾಗೂ ಶ್ರೀಮತಿ ಶೀಲಾ ಚಂದ್ರಶೇಖರ್ ಇವರ ಮಾರ್ಗದರ್ಶನದಲ್ಲಿ ಭರತನಾಟ್ಯ ತರಬೇತಿಯನ್ನು ಮುಂದುವರೆಸಿದ್ದಾರೆ. ಭರತನಾಟ್ಯದಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ವಿದ್ವತ್ ಪದವಿ ಹಾಗು ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿಯನ್ನು ಪಡೆದಿರುವ ಇವರು, 2008ರಲ್ಲಿ ಭರತನಾಟ್ಯ ರಂಗಪ್ರವೇಶವನ್ನು ಪೂರೈಸಿ, ದೇಶ ವಿದೇಶಗಳಲ್ಲಿ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ನಾಟ್ಯ ಪ್ರದರ್ಶನಗಳನ್ನು ನೀಡಿದ್ದಾರೆ.ಇಂಜಿನಿಯರಿಂಗ್  ಪದವಿಯನ್ನು ಗಳಿಸಿ ಸಾಫ್ಟ್ ವೇರ್ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದ ಇವರು ಹಲವು ವರ್ಷಗಳ ಹಿಂದೆ ತಮ್ಮ ವೃತ್ತಿಯನ್ನು ತ್ಯಜಿಸಿ "ಕಲಾಬಿಂದು" ಎಂಬ ನಾಟ್ಯ ಶಾಲೆಯನ್ನು ಸ್ಥಾಪಿಸಿ, ಹಲವಾರು ವಿದ್ಯಾರ್ಥಿಗಳಿಗೆ ನಾಟ್ಯ ತರಬೇತಿಯನ್ನು ನೀಡುತ್ತಾ ಕಲಾಸೇವೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಇವರು ನೂಪುರ ಭ್ರಮರಿ ಸಂಸ್ಥೆಯ 'ನೃತ್ಯಶಿಲ್ಪಯಾತ್ರೆ' ಅಧ್ಯಯನದ ತರಬೇತಿಯನ್ನು (ಇಂಟರ್ನ್ ಶಿಪ್) ಪಡೆಯುತ್ತಿದ್ದಾರೆ.

Copyright protected